[MR DEPUTY SPEAKER in the Chair]

Mysore Excise (Second Amendment) Bill, 1970

(i) Statutory Resolution to disapprove Ordinance 4 of 1970

(ii) Motion to Consider

(Debete Continued)

†ಶ್ರೀ ಪಿ. ವಿ. ಭಕ್ತಾಳ್ (ಸೂರತ್ಕಲ್).—ಮಾನ್ಯ ಅಧ್ಯಕ್ಷರೇ, ಮೊನ್ನೆ ನಾನು ಈ ಅಬ್ಕಾರಿ ಆಫೀಸರ್ ಹಾಗೂ ಅಬ್ಕಾರಿ ಕಂಟ್ರಾಕ್ಟರ್‌ಗಳು ನೇಮಕ ಮಾಡುವಂತಹ ಗೂಂಡಾಗಳು ಜನರಿಗೆ ಕೊಡುತ್ತಿರುವ ಹಿಂಸೆಯ ಬಗ್ಗೆ ಮಾತನಾಡ ತ್ತಿದ್ದೆ. ಆ ಸಮಯದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆ ಯವರು ಏನು ಯಕ್ಷಗಾನ ಮಾಡುತ್ತಿದ್ದೀರಾ ಎಂದು ಪರಿಹಾಸ್ಯ ಮಾಡಿದರು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ತಮ್ಮನ್ನು ಪರಿಹಾಸ್ಯ ಮಾಡಲಿಲ್ಲ. ತಮ್ಮ ಮಾತಿನ ಶೈಲಿಯನ್ನು ಹೊಗಳಿದೆ.

ಶ್ರೀ ಪಿ. ವಿ. ಭಕ್ತಾಳ್.—ಬಹಳ ಸಂತೋಷ. ಆದರೆ ಇವತ್ತು ನಾನು ಯಕ್ಷಗಾನ ಮಾಡುವು ದಿಲ್ಲ. ಆ ದಿನ ಪ್ರಾರಂಭ ಮಾಡಿದ ಭಾಷಣವನ್ನು ಇವತ್ತು ಅಂತ್ಯ ಮಾಡಬೇಕಾಗಿದೆ. ಆ ದಿನ ನಾನು ಈ ತಿದ್ದುಪಡಿ ಮಸೂದೆಯ ಬಗ್ಗೆ ಮಾತನಾಡುತ್ತಿದ್ದಾಗ ಮಂಗಳೂರಿನ ಶ್ರೀಮಾನ್ ಇದಿನಬ್ಬನವರ ಕ್ಷೇತ್ರದಲ್ಲಿ ಜಪ್ಪಿನಮೊಗರುವಿನ ಎಕ್ಸ್‌ಸೈಜ್ ಆಫೀಸರ್ ಅವರು ಮತ್ತು ಮೂರ ಜನ ಗೂಂಡಾಗಳು ಸೇರಿಕೊಂಡು ಬ್ರೆಸಿಲ್‌ಡಿಸೋಜ ಎಂಬಾತನನ್ನು ಕೊಲೆಮಾಡಿದ್ದಾರೆ. ಈ ಬಗ್ಗೆ ಒಂದು ಕಾಲ್‌ಅಟೆನ್‌ಷನ್ ನೋಟೀಸ್ ಕೂಡ ಅಧ್ಯಕ್ಷರ ಬಳಿ ಬಂದಿರಬಹುದು. ಮತ್ತು ಅಲ್ಲಿಯವರು ಮಾನ್ಯಮಂತ್ರಿಗಳಿಗೆ ಟೆಲಿಗ್ರಾಂ ಕೂಡ ಕೊಟ್ಟಿದ್ದಾರೆ. ನನಗೂ ಕೂಡ ಒಂದು ಟೆಲಿಗ್ರಾಂ ಬಂದಿದೆ. ಈ ವಿಚಾರವನ್ನು ಅಕೆಂಬ್ಲಿಯಲ್ಲಿ ಪ್ರಸ್ತಾಪ ಮಾಡಬೇಕೆಂದು ಮತ್ತು ಈ ವಿಚಾರದ ಬಗ್ಗೆ ಸ್ಪೆಷಲ್ ಎನ್‌ಕ್ವೈರಿ ಮಾಡುವಂತೆ ಸರ್ಕಾರವನ್ನು ಕೇಳಬೇಕೆಂದು ಅಲ್ಲಿಯವರು ಟೆಲಿಗ್ರಾಮ್‌ನಲ್ಲಿ ನನ್ನನ್ನು ಕೇಳಿದ್ದಾರೆ. ಇದು ಯಕ್ಷಗಾನವಲ್ಲ, ಅಥವಾ ಗಂಧರ್ವಗಾನವೂ ಸಹ ಅಲ್ಲ. ಇದು ಸ್ಮಶಾನ ಗಾನವಾಗಿದೆ. ಮಹಾಭಾರತದ ವಿರಾಟಪರ್ವ ಈಗ ಪ್ರಾಪ್ತವಾಗಿದೆ. ಮಂಗಳೂರಿನ ಜಿಲ್ಲಾಧಿಕಾರಿಯವರು ವಿರಾಟರಾಜನಂತೆ ಇದ್ದಾರೆ. ಅವರು ನ್ಯಾಯವಾದಿಗಳಾಗಿದ್ದರೂ ಕೂಡ ಈ ಗೂಂಡಾಗಳನ್ನು ಕಂಟ್ರೋಲ್ ಮಾಡುವುದಕ್ಕೆ ಅವರಿಗೆ ಸಾಧ್ಯವಾಗುತ್ತಿಲ್ಲ. ಎಕ್ಸೈಜ್ ಆಫೀಸರ್ ಅವರು ಕೀಚಕರಾಗಿದ್ದಾರೆ ಕಂಟ್ರಾಕ್ಟರುಗಳು ನೇಮಕ ಮಾಡಿದಂತಹ ಉಪಕೀಚಕರು ನೂರಾರು ಮಂದಿ ಇದ್ದಾರೆ. ಇವತ್ತು ಇಡೀ ರಾಜ್ಯದಲ್ಲಿ 200 ಅಥವಾ 300 ಜನ ಎಕ್ಸೈಜ್ ಗಾರ್ಡ್‌ಗಳು ಇವ್ವಾರೆ. ಇದು ಯಾತಕ್ಕೂ ಕೂಡ ಸಾಲದು. ಇವತ್ತು ಎಕ್ಸೈಜ್ ಕಂಟ್ರಾಕ್ಟರ್‌ಗಳು ತಮ್ಮ ಅನುಕೂಲಕ್ಕಾಗಿ ನೂರಾರು ಜನ ಗೂಂಡಾಗಳನ್ನು ನೇಮಕ ಮಾಡಿ ಕೊಂಡಿದ್ದಾರೆ. ಇವರಲ್ಲ ರಿಟೈರ್ ಆದಂಥ ಪೋಲೀಸ್ ಸಿಬ್ಬಂದಿಯವರು ಸಹ ಇದ್ದಾರೆ. ಈ ಎಕ್ಸೈಜ್ ಆಫೀಸರ್‌ಗಳು ಈ ಗೂಂಡಾಗಳ ಸಹಕಾರ ಪಡೆದು ಹೆಣ್ಣುಹುಡುಗಿಯರ ಮೇಲೆ ಕಣ್ಣಿಡೆಯುವು ದನ್ನು ಸಹ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು.—ತಾವು ದಯವಿಟ್ಟು ಬಿಲ್ ಬಗ್ಗೆ ಮಾತನಾಡಬೇಕು.

ಶ್ರೀ ಪಿ. ವಿ. ಭಕ್ತಾಳ್.—ಎಕ್ಸೈಜ್ ಅಧಿಕಾರಿಗಳಿಗೆ ಅಬ್ಸಲ್ಯೂಟ್ ಪವರ್ ಕೊಟ್ಟಿರುವುದರಿಂದ ಇದೆಲ್ಲಾ ನಡೆಯುತ್ತಿದೆ. ಅದಕ್ಕೋಸ್ಕರ ನಾನು ಇದೆಲ್ಲವನ್ನು ಹೇಳಬೇಕಾಗಿದೆ. ನಾನೇನು ಇಲ್ಲಿ ಯಕ್ಷಗಾನ ಮಾಡುತ್ತಿಲ್ಲ. ಬ್ರಿಟೀಷರ್ ಕಾಲದ ಆಡಳಿತದಿಂದ ಹಿಡಿದು ಇಲ್ಲಿಯವರೆವಿಗೂ ಕೂಡ ಯಾರನ್ನಾದರೂ ಕೂಡ ಅರೆಸ್ಟ್ ಮಾಡಬೇಕಾಗಿದ್ದರೆ The accused must have been found committing offence ಎಂದು ಕಾನೂನು ಇತ್ತು. In murder cases, the arrest could be made without warrant ಎಂದು ನಿಯಮವಿದೆ. ಈಗಿನ ಅಮೆಂಡ್‌ಮೆಂಟ್ ಪ್ರಕಾರ 'found committing offence' ಎಂದು ಇದ್ದುದನ್ನು 'for offence' ಎಂದು ಸಬ್ಸ್ಟಿಟ್ಯೂಟ್ ಮಾಡಿದ್ದಾರೆ. ಇದು ಮಂಗನಿಗೆ ಮದ್ಯ ಕುಡಿಸಿ ಅದಕ್ಕೆ ಚೇಳಿನ ಕೈಯಲ್ಲಿ ಕಡಿಸಿದರೆ ಅದು ಏನು ಮಾಡುತ್ತದೋ ಅದರಂತೆ ಈ ಅಧಿಕಾರಿಗಳು ವರ್ತಿಸುತ್ತಿದ್ದಾರೆ. ಈ ಎಕ್ಸೈಜ್ ಅಧಿಕಾರಿಗಳು ಯಾವಾಗಲೂ ತಮ್ಮ ರಾಜಮಹಾರಾಜರಂತೆ ತಮ್ಮ ಸಿಬ್ಬಂದಿಗಳೊಡನೆ